**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ**
**ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ. 376/2021**
**ದಿನಾಂಕ 21/07/2023**

ಫಿರ್ಯಾದುದಾರರುಃ ಶ್ರೀ. ಎನ್.ಸಿ. ರಂಗನಾಥ್,
ಬಿನ್ಃ ಎನ್.ಹೆಚ್. ಚಂದ್ರೇಗೌಡ,
ನಂದೀಪುರ ಗ್ರಾಮ ಮತ್ತು ಅಂಚೆ,
ಮೂಡಿಗೆರೆ ತಾಲ್ಲೂಕು.
ಚಿಕ್ಕಮಗಳೂರು ಜಿಲ್ಲೆ.

-ವಿರುದ್ಧ-

ಆರೋಪಿಃ ಶ್ರೀ. ರವಿ ಕೆ.,
ಬಿನ್ಃ ಗುಡ್ಡಶೆಟ್ಟಿ,
ಬಣಕಲ್ ಅಂಚೆ,
ಮೂಡಿಗೆರೆ ತಾಲ್ಲೂಕು,
ಚಿಕ್ಕವುಗಳೂರು ಜಿಲ್ಲೆ .

ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆ

ಪ್ರಶ್ನೆ-1 ಃ ಅಭಿಯೋಜನೆಯವರ ಸಾಕ್ಷಿದಾರರು ನಿಮ್ಮ ವಿರುದ್ದ ನೀಡಿರುವ ಹೇಳಿಕೆಗಳನ್ನು ಕೇಳಿದ್ದೀರಾ?
ಉತ್ತರಃ

ಪ್ರಶ್ನೆ-2 – ಫ್ರಾಸಾ-1 ಎನ್.ಸಿ. ರಂಗನಾಥ್ ರವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಪಿರ್ಯಾದುದಾರರು ಕಾಫಿ ಬೆಳೆಗಾರರಾಗಿದ್ದು ಆರೋಪಿ ಪಿರ್ಯಾದುದಾರ ತೋಟದ ಕೆಲಸಕ್ಕೆ ಜನರನ್ನು ಕರೆದುಕೊಂಡು ಬರುವುದಾಗಿ ಹೇಳಿ ಮುಂಗಡವಾಗಿ ರೂ.2,50,000/- ಗಳನ್ನು 2017 ಜನವರಿ ತಿಂಗಳಲ್ಲಿ ಪಡೆದು ಕೆಲಸಕ್ಕೆ ಜನರನ್ನು ಕರೆದುಕೊಂಡು ಬಂದಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?
ಉತ್ತರಃ

ಪ್ರಶ್ನೆ.3 ಃ ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಮುಂಗಡವಾಗಿ ಪಡೆದಿರುವ ಹಣದ ಮರುಪಾವತಿಗಾಗಿ ಆರೋಪಿತರು ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಬಣಕಲ್ ಶಾಖೆಯ ಚೆಕ್ ನಂಃ 900192 ನ್ನು ದಿನಾಂಕಃ 17/07/2017, ರೂ.2,50,000/- ಗಳು ಎಂದು ನಮೂದಿಸಿ ತಮಗೆ ಚೆಕ್ ನೀಡಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ.4 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಸದರಿ ಚೆಕ್ ನ್ನು ನಗದಿಕರಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕನ್ನಾಪುರ ಶಾಖೆಗೆ ಹಾಜರು ಮಾಡಿದ್ದು ಸದರಿ ಬ್ಯಾಂಕಿನವರು ಆರೋಪಿ ನೀಡಿದ ಚೆಕ್ "Funds in sufficient" ಎಂಬ ಹಿಂಬರಹಗಳೊಂದಿಗೆ ದಿನಾಂಕಃ 04/10/2017 ರಂದು ಅಮಾನ್ಯಗೊಂಡು ವಾಪಾಸ್ಸಾಗಿರುತ್ತದೆ, ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?
ಉತ್ತರಃ

ಪ್ರಶ್ನೆ.5 ಃ ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ, ಚೆಕ್ ಅಮಾನ್ಯಗೊಂಡ ಬಗ್ಗೆ ವಕೀಲರ ಮುಖಾಂತರ ದಿನಾಂಕಃ 16/10/2017 ರಂದು ತಿಳುವಳಿಕೆ ಪತ್ರವನ್ನು ನೊಂದಾಯಿತ ಅಂಚೆಯ ಮೂಲಕ ನೀಡಿದ್ದರು ಸಹ ನೀವು ಅವರಿಗೆ ಚೆಕ್ ಬಾಬ್ತು ಹಣವನ್ನು ನೀಡಿರುವುಲ್ಲವೆಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?
ಉತ್ತರ ಃ

ಪ್ರಶ್ನೆ -6 ನಿಮಗೆ ಹೆಚ್ಚಿಗೆ ಏನಾದರೂ ಹೇಳುವುದು ಇದೆಯೆ?
ಉತ್ತರ ಃ

ಪ್ರಶ್ನೆ- 7 ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ?
ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಅರ್ಥವಾಗುವ ರೀತಿಯಲ್ಲಿ ಓದಿ ಹೇಳಿದ್ದು, ಆರೋಪಿಯು ಅರ್ಥಮಾಡಿಕೊಂಡು ನೀಡಿರುವ ಉತ್ತರವನ್ನು ಪೂರ್ಣವಾಗಿ ಹಾಗೂ ಸತ್ಯವಾಗಿ ದಾಖಲಿಸಿರುತ್ತೇನೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ, ಮೂಡಿಗೆರೆ.